ಇ. ಅಕ್ರಮ:ಸಕ್ರಮದಲ್ಲಿ ಫಲಾನುಭವಿಗಳಿಗೆ ಸಕ್ರಮಗೊಳಿಸಲಾಗುವ ಗರಿಷ್ಟ ಭೂಮಿಯ ವಿಸ್ತೀರ್ಣ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಹೌದು; ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94(ಎ) (4)ರ ಮೊದಲನೆಯ ಪರಂತುಕ ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಮೊದಲನೆ ಪರಿಚ್ಛೇದದಲ್ಲಿನ ವಿವರಣೆಯಂತೆ ಲೆಕ್ಕಾಚಾರ ಹಾಕಲಾಗುತ್ತಿದೆ.

ಆ. ಪರಿಶೀಲಿಸಲಾಗುವುದು.

ಇ. ಅಕ್ರಮ ಸಾಗುವಳಿದಾರರು ಹೊಂದಿರುವ ಸಾಗುವಳಿ ಜಮೀನು ಸೇರಿ 2 ಹೆಕ್ಟೇರ್ ಮಿತಿ ಇರತ್ತದೆ.

ಉಡುಪಿ ಜಿಲ್ಲೆಯ ಅನಂತಪದ್ಮನಾಭ ದೇವಸ್ಥಾನದ ಜಮೀನುಗಳ ವಿವರ

878 (1338) - ಶ್ರೀ ಜಯಪ್ರಕಾಶ್ ಹೆಗ್ಡೆ.ಕೆ. (ಬ್ರಹ್ಮಾವರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಉಡುಪಿ ಜಿಲ್ಲೆಯ ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಜಮೀನುಗಳ ವಿವರಗಳೇನು? ದೇವಸ್ಥಾನದ ಜಮೀನಿಗೆ ಸಂಬಂಧಪಟ್ಟ ಸ್ಥಳದ ಅಕ್ರಮವಾಗಿ ಕಟ್ಟಡ ಇತ್ಯಾದಿಗಳನ್ನು ಕಟ್ಟಿಕೊಂಡಿದವರ ಮೇಲೆ ಸರ್ಕಾರದವರು ಜರುಗಿಸಿದ ಕ್ರಮಗಳೇನು? ಅಕ್ರಮ ಜಮೀನಿನ ವಿವರಗಳೇನು?

2. ಈಗಲಾದರೂ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕೂಡಲೆ ಕ್ರಮಕೈಗೊಳ್ಳದೆ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ದೇವಸ್ಥಾನದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಕರ್ನಾಟಕದ ಭೂ ಸುಧಾರಣೆ ಕಾಯಿದೆ ಜಾರಿಗೆ ಬರುವ ಪೂರ್ವದಲ್ಲಿ ಅಂದಾಜು 1153.99 ಎಕರೆ ಜಮೀನು ಇದ್ದು, ಈ ಜಮೀನಿನ ಪೈಕಿ ಅಂದಾಜು 1107.81 ಎಕರೆ ಜಮೀನು ಭೂ ಸುಧಾರಣಾ ಕಾಯಿದೆ ಪ್ರಕಾರ ಬಿಟ್ಟು ಹೋಗಿದ್ದು, ಪ್ರಸ್ತುತ ದೇವಳದ ವಶದಲ್ಲಿರುವ ಜಮೀನು 46.18 ಎಕರೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ದೇವಸ್ಥಾನದ ಜಮೀನಿನಲ್ಲಿ ಅಕ್ರಮ ಕ್ಟಟಡ ಕಟ್ಟಿದ ಪ್ರಕರಣ ಇರುವುದಿಲ್ಲ.

ಅನಧಿಕೃತವಾಗಿ ಕಟ್ಟಲಾಗುತ್ತಿದೆ ಎನ್ನುವ ಕಟ್ಟಡವು ಪೆರ್ಡೂರು ಗ್ರಾಮದ ಸ.ನಂ. 127 ರಲ್ಲಿನ 0.03 ಸೆಂಟ್ಸ್ ಹಾಗೂ 0.12 ಸೆಂಟ್ಸ್ ಸ್ಥಳದಲ್ಲಿ ಇದ್ದು, ಶ್ರೀ ಕೊಕ್ರ ಪೂಜಾರಿಯವರು ಈ ಸ್ಥಳದ ಜಾಲ ಗೇಣಿದಾರರಾಗಿದ್ದು, ಉಡುಪಿ ಸಿವಿಲ್ ಜಡ್ಜ್ ನ್ಯಾಯಾಲಯದ ಓ.ಎಸ್. ನಂ. 707/90 ಹಾಗೂ ಎಕ್ಸಿಕ್ಯೂಷನ್ ದಾವೆ ನಂ. 521/97 ದಿನಾಂಕ:18-7-1998 ರಂತೆ ರಾಜೀ ಡಿಕ್ರೀ ಮೂಲಕ ಖಾಯಂ ಗೇಣಿ ಹಕ್ಕುವಾರಿಸು ಹಕ್ಕಿನಂತೆ ಶಾಂತರಾಮಸೂಡರ ಹೆಸರಿಗೆ ದಾಖಲಾಗಿದ್ದು, ಸದರಿ ಸ್ಥಳವು ಬ್ರಹ್ಮಾವರ ಉಪ ನೋಂದಣಾಧಿಕಾರಿಯವರ ದಾಸ್ತಾವೇಜು ನಂ. 1232/98-99, ದಿನಾಂಕ 20-10-1998 ರಂತೆ ನೋಂದಣಿಯಾಗಿ ಆರ್.ಟಿ.ಸಿ. ಕಾಲಂ 9ರಲ್ಲಿ ಶಾಂತರಾಮ ಸೂಡರ ಇವರ ಖಾಯಂ ಗೇಣಿದಾರರೆಂದು ದಾಖಲಾಗಿರುತ್ತದೆ.

2. ಸಿವಿಲ್ ನ್ಯಾಯಾಲಯ ಮತ್ತು ಭೂ ಸುಧಾರಣೆ ಟ್ರಿಬುನಲ್ ನ್ಯಾಯಾಲಯದಲ್ಲಿ ತೀರ್ಮಾನವಾಗಿರುತ್ತದೆ. ಆದ್ದರಿಂದ ಅನಧಿಕೃತ ಕಟ್ಟಡಗಳನ್ನು ಕಟ್ಟಿರುವ ವ್ಯಕ್ತಿಗಳನ್ನು ತೆರವುಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರವು ರೋರಿಕೆ ಎಸ್ಟೇಟ್ ಅನ್ನು ಅಲಕ್ಷ ಮಾಡುತ್ತಿರುವುದು

879 (1137) - ಶ್ರೀ ಕೈಲಾಸ್‌ನಾಥ್ ಪಾಟೀಲ್ (ಚಿಂಚೋಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸರಕಾರವು ರೋರಿಕೆ ಎಸ್ಟೇಟ್ ಅನ್ನು ಅಲಕ್ಷ ಮಾಡುತ್ತಿರುವುದು ಸತ್ಯವೇ?

ಆ. ಹಾಗಿದ್ದರೆ ಎಸ್ಟೇಟನ್ನು ಬೆಂಗಳೂರಿನ ಮತ್ತೊಂದು ಪ್ರವಾಸೀ ತಾಣವನ್ನಾಗಿ ಪರಿವರ್ತಿಸಲು ಸರಕಾರದ ನಿಲುವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ರೋರಿಕೆ ಮತ್ತು ದೇವಿಕಾರಾಣಿ ಎಸ್ಟೇಟ್ (ಅರ್ಜನ ಮತ್ತು ವರ್ಗಾವಣೆ) ಅಧಿನಿಯಮ 1996ರ ಪ್ರಕಾರ, ಸರ್ಕಾರದ ಅಧಿಸೂಚನೆದನ್ವಯ ರೋರಿಕೆ ಎಸ್ಟೇಟನ್ನು ಸರಕಾರದ ವಶಕ್ಕೆ ಪಡೆದುಕೊಳ್ಳಲಾಗಿರುತ್ತೆ. ಮಾನ್ಯ ಉಚ್ಚ ನ್ಯಾಯಾಲಯ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದು ದಿನಾಂಕ 16-7-2002 ರಂದು ಮಾನ್ಯ ಉಚ್ಚ ನ್ಯಾಯಾಲಯದಿಂದ ತೀರ್ಪು ಪ್ರಕಟಣೆಗೊಂಡಿರುತ್ತದೆ. ರೋರಿಕೆ ಎಸ್ಟೇಟನ್ನು ಅಭಿವೃದ್ಧಿ ಪಡಿಸುವ ಮೊದಲನೇ ಹಂತವಾಗಿ ರೋರಿಕೆ ಮತ್ತು ದೇವಿಕಾರಾಣಿರವರಿಗೆ ಸಮಾಧಿ ಕಟ್ಟುವ ಕಾರ್ಯ ನಡೆಯುತ್ತಿರುತ್ತದೆ.

ಆ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಸಲುವಾಗಿ ಆದ ಖರ್ಚು

880 (1555) - ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗಡಿ ಪ್ರದೇಶಾಭಿವೃದ್ಧಿ ಸಲುವಾಗಿ ರಾಜ್ಯದಲ್ಲಿ ಇಲ್ಲಿಯವರೆಗೆ ಆದ ಖರ್ಚು ಎಷ್ಟು?

ಆ. ಆ ಪೈಕಿ ಚಿಂಚೊಳಿ ತಾಲ್ಲೂಕಿಗೆ ಒದಗಿಸಿದ ಹಣ ಎಷ್ಟು?

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ. ರೂ. 99.98 ಕೋಟಿ

ಆ. ರೂ. 2.88 ಕೋಟಿ

ಚಿಂಚೋಳಿ ಮತಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆಗಳ ದುರಸ್ಥಿ

881 (1556) - ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂಚೋಳಿ ಮತಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆಗಳ ದುರಸ್ತಿ ಮತ್ತು 3 ವರ್ಷದ ನಿರ್ವಹಣೆ ಗುತ್ತಿಗೆದಾರರು ಸರಿಯಾಗಿ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದರೆ, ಈ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳೇನು?